# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 580
2. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್
3. ಉತ್ತರಿಸಬೇಕಾದ ದಿನಾಂಕ : 22/07/2019
4. ಉತ್ತರಿಸಬೇಕಾದ ಸಚಿವರು : ಮಾನ್ಯ ಸಹಕಾರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರೈತಾಪಿ ವರ್ಗದವರು ಬೆಳೆದ ಭತ್ತ ಹಾಗೂ ದ್ವಿದಳ ಧಾನ್ಯಗಳನ್ನು ಅನಧಿಕೃತ ದಲ್ಲಾಳಿಗಳು ಕಡಿಮೆ ದರದಲ್ಲಿ ಮತ್ತು ತೂಕದಲ್ಲಿ ಮೋಸ ಮಾಡಿ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ | ಬಂದಿದ್ದಲ್ಲಿ, ಅನಧಿಕೃತ ದಲ್ಲಾಳಿಗಳನ್ನು ನಿಯಂತ್ರಿಸಲು ಸರ್ಕಾರವು ಕೈಗೊಂಡಿರುವ ಕಾನೂನು ರೀತಿಯ ಕ್ರಮಗಳೇನು (ವಿವರ ನೀಡುವುದು) | ಆದಾಗ್ಯೂ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>ಸರ್ಕಾರವು ಕೃಷಿ ಮಾರಾಟ ರಂಗದಲ್ಲಿ ಸುಧಾರಣೆಗಳನ್ನು ತರಲು ಅಧ್ಯಯನ ನಡೆಸಿ ಕೃಷಿ ಮಾರಾಟ ನೀತಿ–2013ನ್ನು ಅಂಗೀಕರಿಸಿದ್ದು, ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಜಾರಿಗೆ ತರುವ ಸಂಬಂಧ ಕಾಯ್ದೆಗೆ ತಿದ್ದುಪಡಿ ಮಾಡಿ ಜಾರಿಗೆ ತರಲಾಗಿದೆ.<br><br>ಪ್ರಸ್ತುತ ರಾಜ್ಯದಲ್ಲಿ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದು 92 ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಮಾರಾಟ ನಿಯಂತ್ರಣ ಕಕ್ಷೆಗೆ ಒಳಪಡಿಸಿದೆ.<br><br>160 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆನ್‌ಲೈನ್ ವಹಿವಾಟು ಜಾರಿಯಲ್ಲಿದ್ದು ಲೈಸೆನ್ಸ್ ಪಡೆದ ಎಲ್ಲಾ ಪೇಟೆ ಕಾರ್ಯಕರ್ತರಿಗೆ ಸಂಬಂಧಿಸಿದ ವ್ಯಾಪಾರ ವಹಿವಾಟು ಎಲೆಕ್ಟ್ರಾನಿಕ್ ವೇದಿಕೆ ಮೂಲಕ ನಡೆಯುವುದರಿಂದ ಪಾರದರ್ಶಕತೆ ತರಲು ಸಹಾಯವಾಗುತ್ತದೆ. ಎಲೆಕ್ಟ್ರಾನಿಕ್ ತೂಕದ ಯಂತ್ರಗಳ ಮೂಲಕ ತೂಕ ಮಾಡಲು ಕಡ್ಡಾಯಗೊಳಿಸಲಾಗಿದೆ.<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರಡಿ ಲೈಸೆನ್ಸ್ ಪಡೆದ ಪೇಟೆಕಾರ್ಯಕರ್ತರು ಕಲಂ 8ರಲ್ಲಿ ಮಾರುಕಟ್ಟೆ ಪ್ರಾಂಗಣದ, ಮಾರುಕಟ್ಟೆ ಉಪ ಪ್ರಾಂಗಣದ, ಉಪ ಮಾರುಕಟ್ಟೆ ಪ್ರಾಂಗಣದ, ಖಾಸಗಿ ಮಾರುಕಟ್ಟೆ |

...2

| | | |
|---|---|---|
| | | ಪ್ರಾಂಗಣದ ಅಥವಾ ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣದ ಹೊರತಾಗಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿಗಾಗಿ ಅಥವಾ ಮಾರಾಟಕ್ಕಾಗಿ ಉಪಯೋಗಿಸುವಂತಿಲ್ಲ ಎಂದು ನಿರೂಪಣೆ ಇರುತ್ತದೆ.<br><br>ದಲ್ಲಾಲರು ಪರವಾನಗಿ ಪಡೆಯಲು ಅರ್ಜಿಯೊಂದಿಗೆ ವ್ಯಾಪಾರ ಸ್ಥಳದ ಹೆಸರು ಮತ್ತು ವಿಳಾಸವನ್ನು ನಮೂದಿಸಲು ಕಾಯ್ದೆಯಲ್ಲಿ ನಿಗಧಿಪಡಿಸಿದೆ<br><br>ಪ್ರಾಂಗಣದಲ್ಲಿ ಅವಕವಾಗುವ ಕೃಷಿ ಉತ್ಪನ್ನಗಳನ್ನು ಪ್ರಾಂಗಣದ ದ್ವಾರದಲ್ಲಿ ಗೇಟ್‌ಪಾಸ್ ಎಂಟ್ರಿ ಮಾಡಿ ರೈತರ/ದಲ್ಲಾಲರ ವಿವರಗಳನ್ನು ದಾಖಲಿಸಲು ಕ್ರಮ ವಹಿಸಲಾಗಿದೆ.<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 75 ರಲ್ಲಿ ಕೃಷಿ ಉತ್ಪನ್ನಗಳ ಮಾರಾಟದ ಮೌಲ್ಯದ ಪಾವತಿ ಬಗ್ಗೆ ನಿರೂಪಣೆ ಇರುತ್ತದೆ ಹಾಗೂ ಕಲಂ 78, 78-ಎ ರಡಿ ಕಮೀಷನ್ ಏಜೆಂಟ್‌ರ ಕಮೀಷನ್ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಿದ್ದು, ಮಾರುಕಟ್ಟೆ ಸಮಿತಿಗಳಿಂದ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ.<br><br>ರೈತರಿಗೆ ತಮ್ಮ ಉತ್ಪನ್ನಗಳು ಮಾರಾಟವಾದ ದಿನದಂದೇ ಮಾರಾಟದ ಬೆಲೆ ಪಾವತಿ, ಸಮಿತಿಯ ಉಪ ನಿಯಮಗಳಲ್ಲಿ ಅವಕಾಶಿಸಿರುವಂತೆ ಮಾರಾಟದ ನಂತರದಲ್ಲಿ ತಕ್ಕಪಟ್ಟಿ ನೀಡುವಿಕೆ, ಮುಂತಾದ ಕ್ರಮಗಳನ್ನು ಕೈಗೊಳ್ಳಲು ಕಾನೂನು ಜಾರಿಕೋಶದ ಅಧಿಕಾರಿಗಳು/ಜಿಲ್ಲಾ ಉಪ/ಸಹಾಯಕ ನಿರ್ದೇಶಕರುಗಳಿಗೆ ಕಟ್ಟುನಿಟ್ಟಿನ ನಿಯಂತ್ರಣಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸುತ್ತೋಲೆ ನಿರ್ದೇಶನಗಳನ್ನು ನೀಡಲಾಗಿದೆ. |
| ಇ | ಇಲ್ಲಿಯವರೆಗೆ ಅನಧಿಕೃತ ದಲ್ಲಾಲಿಗಳ ಮೇಲೆ ದಾಖಲಿಸಿರುವ ಪ್ರಕರಣಗಳ ವಿವರ ಒದಗಿಸುವುದು ಮತ್ತು ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನಾತ್ಮಕ ಕ್ರಮ ಕೈಗೊಂಡಿರುವ ಬಗ್ಗೆ ವಿವರ ಒದಗಿಸುವುದು? | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅನಧಿಕೃತವಾಗಿ ಲೈಸೆನ್ಸ್ ಪಡೆಯದೆ ಕಾರ್ಯನಿರ್ವಹಿಸುತ್ತಿರುವ ಪ್ರಕರಣಗಳು ದಾಖಲಾಗಿರುವುದಿಲ್ಲ. |

**ಸಂಖ್ಯೆ: ಸಇ 102 ಎಂಆರ್‌ಇ 2019**

(ಬಂಡೆಪ್ಪ ಖಾಶೆಂಪೂರ)
**ಸಹಕಾರ ಸಚಿವರು.**

ಅನುಬಂಧ- 1

ಶ್ರೀ ಬಿ. ಶ್ರೀರಾಮುಲು , ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ: 2082

ಹೈದರಾಬಾದ್-ಕರ್ನಾಟಕ ಪ್ರದೇಶದ ಖಾಲಿಯಿರುವ ಹುದ್ದೆಗಳ ಮಾಹಿತಿ.

ಆಡಳಿತ ಇಲಾಖೆಯ ಹೆಸರು:-ಕೃಷಿ ಇಲಾಖೆ

| ಕ್ರ ಸಂ | ಹುದ್ದೆವಾರು ಹೆಸರು | ಜಿಲ್ಲಾವಾರು ವಿವರ | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | ಬಳ್ಳಾರಿ ಜಿಲ್ಲೆ | | | ಕಲಬುರಗಿ ಜಿಲ್ಲೆ | | | ಕೊಪ್ಪಳ ಜಿಲ್ಲೆ | | | ಬೀದರ್ ಜಿಲ್ಲೆ | | | ರಾಯಚೂರು ಜಿಲ್ಲೆ | | | ಯಾದಗಿರಿ ಜಿಲ್ಲೆ | | |
| | | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ |
| 1 | 2 | 3 | | | 4 | | | 5 | | | 6 | | | 7 | | | 8 | | |
| 1 | ಸಹಾಯಕ ಕೃಷಿ ನಿರ್ದೇಶಕರು | 14 | 9 | 5 | 15 | 9 | 6 | 12 | 7 | 5 | 10 | 7 | 3 | 11 | 5 | 6 | 8 | 4 | 4 |
| 2 | ಸಹಾಯಕ ಕೃಷಿ ನಿರ್ದೇಶಕರು (ರೈತ ಮಹಿಳೆ) | 2 | 1 | 1 | 2 | 1 | 1 | 2 | 1 | 1 | 2 | 0 | 2 | 2 | 1 | 1 | 0 | 0 | 0 |
| 3 | ಆಡಳಿತಾಧಿಕಾರಿ | 1 | 0 | 1 | 1 | 0 | 1 | 1 | 0 | 1 | 1 | 0 | 1 | 1 | 0 | 1 | 0 | 0 | 0 |
| 4 | ಕೃಷಿ ಅಧಿಕಾರಿ | 63 | 46 | 17 | 90 | 57 | 33 | 52 | 36 | 16 | 50 | 29 | 21 | 62 | 50 | 12 | 36 | 22 | 4 |
| 6 | ಆಡಳಿತ ಸಹಾಯಕ | 2 | 2 | 0 | 2 | 2 | 0 | 1 | 1 | 0 | 1 | 0 | 1 | 1 | 1 | 0 | 1 | 1 | 0 |
| 7 | ಸಹಾಯಕ ಕೃಷಿ ಅಧಿಕಾರಿ | 85 | 51 | 34 | 102 | 61 | 41 | 61 | 42 | 19 | 79 | 61 | 18 | 85 | 65 | 20 | 54 | 29 | 25 |
| 8 | ಅಧೀಕ್ಷಕರು | 14 | 12 | 2 | 13 | 13 | 0 | 10 | 5 | 5 | 11 | 9 | 2 | 11 | 10 | 1 | 7 | 4 | 3 |
| 9 | ಪ್ರಥಮ ದರ್ಜೆ ಸಹಾಯಕ | 20 | 18 | 2 | 21 | 20 | 1 | 15 | 15 | 0 | 16 | 12 | 4 | 16 | 14 | 2 | 9 | 6 | 3 |
| 10 | ಶೀಘ್ರಲಿಪಿಗಾರರು | 1 | 1 | 0 | 1 | 1 | 0 | 1 | 1 | 0 | 1 | 1 | 0 | 1 | 0 | 1 | 1 | 0 | 1 |
| 11 | ದ್ವಿತೀಯ ದರ್ಜೆ ಸಹಾಯಕ | 23 | 10 | 13 | 23 | 22 | 1 | 14 | 11 | 3 | 19 | 19 | 0 | 19 | 14 | 5 | 12 | 6 | 6 |
| 12 | ಬೆರಳಚ್ಚುಗಾರರು | 13 | 2 | 11 | 15 | 8 | 7 | 11 | 1 | 10 | 10 | 3 | 7 | 10 | 0 | 10 | 6 | 2 | 4 |
| 13 | ವಾಹನ ಚಾಲಕರು | 14 | 1 | 13 | 13 | 1 | 12 | 9 | 2 | 7 | 11 | 2 | 9 | 10 | 2 | 8 | 7 | 0 | 7 |
| 14 | ನಕ್ಷೆಗಾರರು | 0 | 0 | 0 | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 15 | ರೇಖಾಗಾರರು | 7 | 3 | 4 | 4 | 1 | 3 | 2 | 2 | 0 | 2 | 2 | 0 | 4 | 3 | 1 | 1 | 1 | 0 |
| 16 | ಕೃಷಿ ಉಪಕರಣ ಮೇಲ್ವಿಚಾರಕರು | 1 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 17 | ಪ್ರಯೋಗಶಾಲಾ ಸಹಾಯಕ | 2 | 1 | 1 | 6 | 2 | 4 | 8 | 2 | 6 | 0 | 0 | 0 | 0 | 0 | 0 | 0 | 0 | 0 |
| 18 | ಪ್ರಯೋಗಶಾಲಾ ಪರಿಚಾರಕ | 3 | 2 | 1 | 12 | 7 | 5 | 15 | 2 | 13 | 0 | 0 | 0 | 0 | 0 | 0 | 0 | 0 | 0 |
| 19 | ಬಾಣಸಿಗ | 1 | 1 | 0 | 1 | 0 | 1 | 1 | 0 | 1 | 1 | 0 | 1 | 1 | 1 | 0 | 0 | 0 | 0 |
| 20 | ಗ್ರೂಪ್-ಡಿ | 37 | 24 | 13 | 38 | 14 | 24 | 25 | 12 | 13 | 27 | 16 | 11 | 24 | 18 | 6 | 14 | 4 | 10 |
| | ಒಟ್ಟು | 303 | 184 | 119 | 360 | 220 | 140 | 240 | 140 | 100 | 241 | 161 | 80 | 258 | 184 | 74 | 156 | 79 | 77 |

## ಅನುಬಂಧ-2

### ಖಾಲಿ ಹುದ್ದೆಗಳ ಮಾಹಿತಿ

| | | ಕಲಬುರುಗಿ | | | ಬೀದರ್ | | | ರಾಯಚೂರು | | | ಕೊಪ್ಪಳ | | | ಬಳ್ಳಾರಿ | | | ಯಾದಗಿರಿ | | |
|---|---|---|---|---|---|---|---|---|---|---|---|---|---|---|---|---|---|---|---|
| ಕ್ರಸಂ | ಹುದ್ದೆಗಳ ವಿವರ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ |
| 1 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ | 1 | 1 | 0 | 1 | 1 | 0 | 1 | 0 | 1 | 1 | 1 | 0 | 1 | 0 | 1 | 1 | 1 | 0 |
| 2 | ವಲಯ ಆರಣ್ಯ ಅಧಿಕಾರಿ | 1 | 1 | 0 | 1 | 1 | 0 | 1 | 1 | 0 | 1 | 1 | 0 | 1 | 1 | 0 | 1 | 1 | 0 |
| 3 | ಉಪ ವಲಯ ಅರಣ್ಯ ಅಧಿಕಾರಿ | 2 | 1 | 1 | 2 | 2 | 0 | 2 | 1 | 1 | 2 | 2 | 0 | 2 | 2 | 0 | 2 | 2 | 0 |
| 4 | ಪ್ರಥಮ ದರ್ಜೆಸಹಾಯಕ (ಅರಣ್ಯ) | 1 | 1 | 0 | 1 | 0 | 1 | 1 | 1 | 0 | 1 | 1 | 0 | 1 | 1 | 0 | 1 | 0 | 1 |
| 5 | ಹಿರಿಯ ಸಹಾಯಕ ತೋಟಗಾರಿಕೆ ಅದಿಕಾರಿ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 6 | ಸಹಾಯಕ ತೋಟಗಾರಿಕೆ ಅಧಿಕಾರಿ | 1 | 1 | 0 | 1 | 1 | 0 | 1 | 0 | 1 | 1 | 0 | 1 | 1 | 0 | 1 | 1 | 0 | 1 |
| 7 | ತೋಟಗಾರಿಕೆ ಸಹಾಯಕ | 2 | 1 | 1 | 2 | 0 | 2 | 2 | 0 | 2 | 2 | 0 | 2 | 2 | 0 | 2 | 2 | 0 | 2 |
| 8 | ಪ್ರಥಮ ದರ್ಜೆ ಸಹಾಯಕರು(ತೋಟಗಾರಿಕೆ) | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | ಒಟ್ಟು | 8 | 6 | 2 | 8 | 5 | 3 | 8 | 3 | 5 | 8 | 5 | 3 | 8 | 4 | 4 | 8 | 4 | 4 |

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ,
ಬೆಂಗಳೂರು